


parag

AN INITIATIVE OF TATA TRUSTS

Bahuroopi ಬಹುರೂಪಿ

# ಬಿಂಬ ಪ್ರತಿಬಿಂಬ

ಮಕ್ಕಳ ಕೃತಿಗಳ ಭಾಷಾಂತರದಲ್ಲಿ ಆಸಕ್ತಿ
ಇರುವ  ಉದಯೋನ್ಮುಖರಿಗೆ ಒಂದು
ಕಲಿಕಾ ಕಾರ್ಯಾಗಾರ

(ಇಂಗ್ಲಿಷ್‌ನಿಂದ ಕನ್ನಡಕ್ಕೆ)

**ಅರ್ಜಿಗಳಿಗೆ ಆಹ್ವಾನ!**

# ಬಿಂಬ ಪ್ರತಿಬಿಂಬ



**ಗುಣಮಟ್ಟದ ಸಮಕಾಲೀನ ಮಕ್ಕಳ ಕೃತಿಗಳ ಲಭ್ಯತೆ ಭಾರತೀಯ ಭಾಷೆಗಳಲ್ಲಿ ಇಂದಿಗೂ ಬಹುದೊಡ್ಡ ಸವಾಲಾಗಿಯೇ ಉಳಿದಿದೆ. ಕನ್ನಡದ ಪುಸ್ತಕಗಳನ್ನು ರೂಪಿಸುವಾಗ ಈ ಭಾಷೆಯಲ್ಲಿ ಸಮಕಾಲೀನ ಕೃತಿಗಳ ಲಭ್ಯತೆ ತೀರಾ ಕಡಿಮೆ ಇರುವುದನ್ನು 'ಪರಾಗ್' ಗಮನಿಸಿದೆ. ಲಭ್ಯವಿರುವ ಪುಸ್ತಕಗಳಲ್ಲಿ ಕೂಡ, ಮಕ್ಕಳ ವಯೋಮಿತಿ, ಪ್ರಕಾರಗಳು ಮತ್ತು ಮಾದರಿಗಳಲ್ಲಿ ಬಹುದೊಡ್ಡ ಅಂತರ ಇದೆ ಎನ್ನುವುದನ್ನು ಗುರುತಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಮಕ್ಕಳು ಮತ್ತು ಹದಿಹರೆಯದವರಿಗೆ ಇಷ್ಟವಾಗುವಂಥ ಹೊಸ ರೀತಿಯ ಸಮಕಾಲೀನ ಸಾಹಿತ್ಯ ಕೃತಿಗಳ ಕೊರತೆ ಇದೆ ಎನ್ನುವುದನ್ನು ಗಮನಿಸಿದೆ. ವಿವಿಧ ಭಾಷೆ, ಪ್ರದೇಶ ಹಾಗೂ ಸಂದರ್ಭದ ವೈವಿಧ್ಯತೆಯನ್ನು ಉತ್ತಮ ಅನುವಾದದ ಮೂಲಕ ಕನ್ನಡಕ್ಕೆ ತಂದಲ್ಲಿ ಈ ಕೊರತೆಯನ್ನು ಒಂದಷ್ಟು ಮಟ್ಟಿಗೆ ತುಂಬಬಹುದು. ಇದರಿಂದಾಗಿ ಸಾಕಷ್ಟು ಒಳ್ಳೆಯ ಹಾಗೂ ವೈವಿಧ್ಯಮಯ ಕೃತಿಗಳು ಮಕ್ಕಳಿಗೆ ದೊರೆಯಲಿದ್ದು ಇವು ಹೆಚ್ಚೆಚ್ಚು ಪ್ರಯೋಗಶೀಲತೆ ಹಾಗೂ ತೊಡಗಿಸಿಕೊಳ್ಳುವಿಕೆಗೆ ದಾರಿ ಮಾಡಿಕೊಡುತ್ತದೆ.**


'ಬಿಂಬ-ಪ್ರತಿಬಿಂಬ' ಈ ನಿಟ್ಟಿನಲ್ಲಿ ಒಂದು ಪುಟ್ಟ ಪ್ರಯತ್ನ. ಇದು ಟಾಟಾ ಟ್ರಸ್ಟ್‌ನ ಅಂಗಸಂಸ್ಥೆಯಾದ 'ಪರಾಗ್', 'ಬಹುರೂಪಿ' ಪ್ರಕಾಶನದ ಸಹಯೋಗದೊಂದಿಗೆ ಉದಯೋನ್ಮುಖ ಕನ್ನಡದ ಭಾಷಾಂತರಕಾರರಿಗೆ ಹಮ್ಮಿಕೊಂಡಿರುವ ಅನುವಾದ ಕಾರ್ಯಾಗಾರ.

ಈ ಕಲಿಕಾ ಕಾರ್ಯಾಗಾರವು, ಕನ್ನಡದ ಭಾಷಾಂತರಕಾರರಿಗೆ ಮಕ್ಕಳ ಸಾಹಿತ್ಯ ಮತ್ತು ಅನುವಾದದ ವಿವಿಧ ಮಜಲುಗಳನ್ನು ಪರಿಶೀಲಿಸಲು ವೇದಿಕೆ ಒದಗಿಸುತ್ತದೆ. ಇಂಗ್ಲಿಷ್ ಮತ್ತು ಇತರ ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಿರುವ ವೈವಿಧ್ಯಮಯ ಸಮಕಾಲೀನ ಮಕ್ಕಳ ಸಾಹಿತ್ಯವನ್ನು ಅರಿಯಲು ಇದು ಅವಕಾಶ ಒದಗಿಸುತ್ತದೆ. ಅಷ್ಟೇ ಅಲ್ಲದೆ ಕನ್ನಡಕ್ಕೆ ಭಾಷಾಂತರ ಮಾಡುವ ವಿಭಿನ್ನ ವಿಧಾನಗಳು ಹಾಗೂ ರೀತಿಗಳನ್ನು ಪ್ರಯೋಗ ಮಾಡುವುದರ ಜೊತೆಗೆ ಈ ಕ್ಷೇತ್ರದ ಪರಿಣಿತರೊಂದಿಗೆ ಸಂವಾದಿಸಲು ಅವಕಾಶ ದೊರಕುತ್ತದೆ.

**ಕಾರ್ಯಾಗಾರದ ಪ್ರಮುಖ ಧ್ಯೇಯೋದ್ದೇಶಗಳು:**

- ಮಕ್ಕಳಿಗಾಗಿ ಕನ್ನಡದಲ್ಲಿ ಸಮಕಾಲೀನ ಕೃತಿಗಳ ಲಭ್ಯತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಕನ್ನಡದ ಮಕ್ಕಳ ಕೃತಿಗಳ ಭಾಷಾಂತರಕಾರರ ಸಮುದಾಯವನ್ನು ರೂಪಿಸಿ, ಬಲಪಡಿಸುವುದು.
- ಕಾರ್ಯಾಗಾರದಲ್ಲಿ ಭಾಗಿಯಾಗುವವರಿಗೆ ಸಮಕಾಲೀನ ಮಕ್ಕಳ ಸಾಹಿತ್ಯವನ್ನು (ಪ್ರಕಾರಗಳು, ಮಾದರಿ ಮತ್ತು ವಿಷಯ) ಹಾಗೂ ಮಕ್ಕಳು ಹಾಗೂ ಹದಿಹರೆಯದವರ ಪುಸ್ತಕಗಳ ಭಾಷಾಂತರದಲ್ಲಿ ಅನುಸರಿಸುವ ಸಿದ್ಧಾಂತ ಮತ್ತು ಅಭ್ಯಾಸವನ್ನು ಪರಿಚಯಿಸುವುದು.
- ಕಾರ್ಯಾಗಾರದಲ್ಲಿ ಭಾಗಿಯಾಗುವವರಿಗೆ, ಮಕ್ಕಳ ಭಾಷಾಂತರದ ಪ್ರಕಾರಗಳು, ಮಾದರಿ ಮತ್ತು ವಸ್ತುವಿಷಯದ ಕುರಿತು ಪ್ರತ್ಯಕ್ಷ ಅನುಭವ ಒದಗಿಸುವುದು.
- ಮಾರ್ಗದರ್ಶನದ ವಿಸ್ತೃತ ಅವಧಿಯಲ್ಲಿ, ಒಳ್ಳೆಯ ಗುಣಮಟ್ಟದ ಹಾಗೂ ಪ್ರಕಟಣಾ ಯೋಗ್ಯವಾದ ಹಸ್ತಪ್ರತಿಗಳನ್ನು ರೂಪಿಸುವುದು.





# ಕಾರ್ಯಾಗಾರದ ವಿವರ

**ಅವಧಿ**

7 ವಾರಗಳು (ಮೂರು ದಿನಗಳ ವಸತಿ ಸಹಿತ ಕಾರ್ಯಾಗಾರ ಮತ್ತು ತಜ್ಞರ ಮಾರ್ಗದರ್ಶನದಲ್ಲಿ 6 ವಾರಗಳ ಸ್ವತಂತ್ರ ಭಾಷಾಂತರ ಕಾರ್ಯ)

**ಇದು ಯಾರಿಗಾಗಿ?**

ಮಕ್ಕಳ ಕೃತಿಗಳನ್ನು ಅನುವಾದಿಸಲು ಆಸಕ್ತಿ ಇರುವವರಿಗೆ ಹಾಗೂ ಉದಯೋನ್ಮುಖ ಬರಹಗಾರರಿಗೆ

**ಇದು ಯಾಕಾಗಿ?**

ಮಕ್ಕಳ ಕೃತಿಗಳನ್ನು ಇಂಗ್ಲಿಷ್ ನಿಂದ ಕನ್ನಡಕ್ಕೆ ಅನುವಾದಿಸಲು.

**ಕಾರ್ಯಾಗಾರದ ಭಾಷೆ**

ಇಂಗ್ಲಿಷ್ ಮತ್ತು ಕನ್ನಡ

**ಭಾಗವಹಿಸುವವರ ಹೊಣೆಗಾರಿಕೆ:**


- 3 ದಿನಗಳ ಈ ವಸತಿ ಸಹಿತ ಕಾರ್ಯಾಗಾರದಲ್ಲಿ ಸಹ ಶಿಬಿರಾರ್ಥಿಗಳು ಮತ್ತು ತಜ್ಞರ ಜೊತೆಗೆ ಸಕ್ರಿಯವಾಗಿ ಚರ್ಚೆಯಲ್ಲಿ ಭಾಗವಹಿಸಬೇಕು.
- ತಜ್ಞ ಮಾರ್ಗದರ್ಶಕರ ಮಾರ್ಗದರ್ಶನದಲ್ಲಿ ಆಯ್ದ ಕೃತಿಯ ಭಾಷಾಂತರ ಕಾರ್ಯ (ನಿಯಮಿತ ಕೆಲಸಗಳ ಜೊತೆಗೆ).
- ನಿಗದಿತ ಕಾಲಾವಧಿಯೊಳಗೆ ಭಾಷಾಂತರ ಮಾಡಿ, ಸ್ಫುಟವಾಗಿ ಸಂಕಲಿಸಿದ ಕೃತಿಗಳನ್ನು ಸಲ್ಲಿಸುವುದು.

**ಅರ್ಹತೆ**

- ಕಡ್ಡಾಯವಾಗಿ 18 ವರ್ಷ ಮೇಲ್ಪಟ್ಟವರಾಗಿರಬೇಕು
- ಇಂಗ್ಲಿಷ್ ಭಾಷೆಯಲ್ಲಿ ಸ್ಫುಟವಾಗಿ ಮಾತನಾಡಲು, ಓದಲು, ಬರೆಯಲು ಬರುವಂತವರಾಗಿರಬೇಕು
- ಕನ್ನಡದಲ್ಲಿ ಬರೆಯಲು ಮತ್ತು ಅನುವಾದಿಸಲು ಅವಶ್ಯವಿರುವ ಸಾಹಿತ್ಯ ಜ್ಞಾನ ಅಗತ್ಯ.
- 2024ರ ಜನವರಿ 26ರಿಂದ 28ವರೆಗೆ ಬೆಂಗಳೂರಿನಲ್ಲಿ ಹಮ್ಮಿಕೊಳ್ಳುವ ವಸತಿ ಸಹಿತ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಬೇಕು.
- ಆನಂತರ 6 ವಾರಗಳ ಕಾಲ ಮಾರ್ಗದರ್ಶಕರ ಸಲಹೆ ಸೂಚನೆಯೊಂದಿಗೆ ಜರುಗುವ ಅನುವಾದ ಕಾರ್ಯದಲ್ಲಿ ಪಾಲ್ಗೊಳ್ಳಲು ಲಭ್ಯರಾಗಿರಬೇಕು.

**ನೀಡಲಾಗುವ ಸೌಲಭ್ಯಗಳು**

- ಅರ್ಜಿಗಳ ಪರಿಶೀಲನೆ ನಡೆಸಿ ಗರಿಷ್ಠ 15 ಶಿಬಿರಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.
- ಮಾರ್ಗದರ್ಶನ: ಕಾರ್ಯಾಗಾರದ ಬಳಿಕ 6 ವಾರಗಳ ಕಾಲ ತಜ್ಞ ಮಾರ್ಗದರ್ಶಕರ ಬೆಂಬಲ ಒದಗಿಸಲಾಗುವುದು. ವಾರಕ್ಕೊಮ್ಮೆ ಕರೆ ಮತ್ತು ಚರ್ಚೆ, ಹಾಗೂ ಕಾಲಕಾಲಕ್ಕೆ ಅನುವಾದಿತ ಕಾರ್ಯದ ಪರಿಶೀಲನೆ.
- ಸಂಪನ್ಮೂಲ: ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸಂಕಲಿತ ಪರಾಮರ್ಶನ ಬರಹಗಳನ್ನು ಒದಗಿಸಲಾಗುವುದು.
- ಪ್ರಯಾಣ ಮತ್ತು ವಸತಿ: 3 ದಿನಗಳ ವಸತಿಯುತ ಕಾರ್ಯಾಗಾರಕ್ಕೆ ಬಂದು ಹೋಗುವ ಪ್ರಯಾಣ ಭತ್ಯೆ, ವಸತಿ ಮತ್ತು ಊಟೋಪಚಾರವನ್ನು ಒದಗಿಸಲಾಗುವುದು.



# ಅರ್ಜಿ ಮತ್ತು ಆಯ್ಕೆ ಪ್ರಕ್ರಿಯೆ

- ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲು ಅರ್ಜಿದಾರರು ಆನ್‌ಲೈನ್‌ನಲ್ಲಿ ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸಬೇಕು. ಅರ್ಜಿಯ ಜೊತೆಗೆ ನೀಡಲಾಗುವ ಸೂಚಿತ ಕಾರ್ಯವನ್ನು ಪೂರ್ಣಗೊಳಿಸಿ ಕಡ್ಡಾಯವಾಗಿ ಸಲ್ಲಿಸಬೇಕು.
- ಸೂಚಿತ ಕಾರ್ಯಗಳ ವಿವರಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ
- ದೂರವಾಣಿ ಸಂದರ್ಶನದ ಜೊತೆಗೆ, ಎರಡು ಹಂತಗಳಲ್ಲಿ ಅರ್ಜಿಗಳನ್ನು ಅಂತಿಮಗೊಳಿಸಲಾಗುವುದು.
- ಆಯ್ಕೆಯ ಕುರಿತು 2024ರ ಜನವರಿ 5ರೊಳಗೆ ಇ-ಮೇಲ್ ಮೂಲಕ ತಿಳಿಸಲಾಗುವುದು.

# ಮುಖ್ಯವಾದ ದಿನಾಂಕಗಳು

| | |
|---|---|
| **2023ರ ಡಿಸೆಂಬರ್ 20** | ಅರ್ಜಿ ಸಲ್ಲಿಸಲು ಕೊನೆಯ ದಿನ |
| **2024ರ ಜನವರಿ 5** | ಆಯ್ಕೆಯಾದ ಶಿಬಿರಾರ್ಥಿಗಳ ಘೋಷಣೆ |
| **2024ರ ಜನವರಿ 26ರಿಂದ 28ರವರೆಗೆ** | ಬೆಂಗಳೂರಿನಲ್ಲಿ 3 ದಿನಗಳ ವಸತಿಸಹಿತ ಕಾರ್ಯಾಗಾರ |
| **2024ರ ಮಾರ್ಚ್ 7** | ಭಾಷಾಂತರಿಸಿದ ಹಸ್ತಪ್ರತಿಯನ್ನು ಸಲ್ಲಿಸಲು ಕೊನೆಯ ದಿನ |

# ಈಗಲೇ ಅರ್ಜಿ ಸಲ್ಲಿಸಿ

ಅರ್ಜಿಗಾಗಿ ಇಲ್ಲಿ ಕ್ಲಿಕ್ ಮಾಡಿ

ಗಮನಿಸಿ: ಅಪೂರ್ಣ ಅರ್ಜಿಗಳನ್ನು ಅಂಗೀಕರಿಸಲಾಗುವುದಿಲ್ಲ


ಇನ್ನಾವುದೇ ಮಾಹಿತಿ/ಸ್ಪಷ್ಟನೆಗಾಗಿ ಸಂಪರ್ಕಿಸಿ:
paragtranslationsworkshop@gmail.com

# ಕಾರ್ಯಾಗಾರದ ಮಾರ್ಗದರ್ಶಕರು




**ಎಂ. ಅಬ್ದುಲ್ ರೆಹಮಾನ್ ಪಾಷಾ**

ಎಂ. ಅಬ್ದುಲ್ ರೆಹಮಾನ್ ಪಾಷಾ ಅವರು ಕನ್ನಡದ ಬರಹಗಾರ, ಅನುವಾದಕ, ಭಾಷಾಶಾಸ್ತ್ರಜ್ಞ ಮತ್ತು ತರಬೇತುದಾರ. ಸಾಹಿತ್ಯ, ಅನುವಾದ, ಸಿನಿಮಾ ಮತ್ತು ಸಂವಹನ ಕ್ಷೇತ್ರದಲ್ಲಿ ಹೆಸರಾಂತ ಸಾಧನೆ ಮಾಡಿದವರು. ಇಂಗ್ಲಿಷ್ ಮತ್ತು ಕನ್ನಡ ಸೇರಿದಂತೆ ಒಟ್ಟು 52 ಕೃತಿಗಳನ್ನು ರಚಿಸಿದ್ದಾರೆ. ಅನೇಕ ಚಲನಚಿತ್ರಗಳು, ಸಾಕ್ಷ್ಯಚಿತ್ರಗಳು ಮತ್ತು ವೈಜ್ಞಾನಿಕ ವಿಡಿಯೋಗಳಿಗಾಗಿ ಕಥೆ ಬರೆದು, ನಿರೂಪಣೆ ಮಾಡುವ ಜೊತೆಗೆ, ಅವುಗಳಲ್ಲಿ ನಟಿಸಿ, ನಿರ್ಮಾಣ ಮಾಡಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸೇರಿದಂತೆ ಹಲವು ಪ್ರತಿಷ್ಠಿತ ಸಂಸ್ಥೆಗಳ ಸದಸ್ಯರಾಗಿದ್ದಾರೆ. ಕನ್ನಡದ ಭಾಷಾಂತರದ ಅಪಾರ ಅನುಭವದೊಂದಿಗೆ ಅವರು ಈ ಕಾರ್ಯಾಗಾರದಲ್ಲಿ ಉಪನ್ಯಾಸಕ ಮತ್ತು ಮಾರ್ಗದರ್ಶಕರಾಗಿ ಪಾಲ್ಗೊಳ್ಳುತ್ತಿದ್ದಾರೆ.




**ಜಿ.ಎನ್. ಮೋಹನ್**

ಜಿ.ಎನ್. ಮೋಹನ್ ಅವರು, ಅನುಭವಿ ಪ್ರಕಾಶಕ, ಸಂಪಾದಕ, ಪತ್ರಕರ್ತ ಹಾಗೂ ಬರಹಗಾರರಾಗಿದ್ದಾರೆ. ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಇವರ ಆಸಕ್ತಿ ಕ್ಷೇತ್ರವಾಗಿದೆ. ನಾಯಕತ್ವ, ಆಡಳಿತ ಮತ್ತು ಬರವಣಿಗೆಯ ವಿಷಯದಲ್ಲಿ ತಮ್ಮ ಸಾಮರ್ಥ್ಯವನ್ನು ಈಗಾಗಲೆ ಸಾಬೀತುಪಡಿಸಿರುವ ಇವರು, ಮಾಧ್ಯಮ ಮತ್ತು ಪ್ರಕಾಶನ ಕಾರ್ಯದಲ್ಲಿ ಒಟ್ಟಾರೆ 25 ವರ್ಷಗಳ ಅನುಭವ ಶ್ರೀಮಂತಿಕೆಯನ್ನು ಹೊಂದಿದ್ದಾರೆ. ಸಾಹಿತ್ಯ ಮತ್ತು ಮಾಧ್ಯಮ ಕ್ಷೇತ್ರಗಳಿಗೆ ಇವರು ನೀಡಿರುವ ಕೊಡುಗೆಯನ್ನು ಗುರುತಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಸೇರಿದಂತೆ ಹಲವಾರು ಪ್ರತಿಷ್ಠಿತ ಸಂಘಸಂಸ್ಥೆಗಳು ಇವರನ್ನು ಪುರಸ್ಕರಿಸಿ, ಗೌರವಿಸಿವೆ.



**ತೇಜಸ್ವಿ ಶಿವಾನಂದ್**

ತೇಜಸ್ವಿ ಶಿವಾನಂದ್ ಅವರು ಬೆಂಗಳೂರಿನ 'ಚಂಪಕ' ಮಕ್ಕಳ ಗ್ರಂಥಾಲಯದಲ್ಲಿ ಗ್ರಂಥಾಲಯ ಶಿಕ್ಷಣ ತಜ್ಞರಾಗಿದ್ದಾರೆ. ಗೋವಾದ 'ಬುಕ್‌ವರ್ಮ್' ಆಯೋಜಿಸುವ ಲೈಬ್ರರಿ ಎಜ್ಯುಕೇಟರ್ಸ್ ಕೋರ್ಸ್‌ನ ಉಪನ್ಯಾಸಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಂಥಾಲಯದೊಂದಿಗೆ ಕಾರ್ಯನಿರ್ವಹಿಸುವ ಹಲವಾರು ಶಾಲೆಗಳು ಮತ್ತು ಸಂಸ್ಥೆಗಳಿಗೆ ಸಲಹೆಗಾರರಾಗಿದ್ದಾರೆ. ಒಬ್ಬ ಉಪನ್ಯಾಸಕ ಹಾಗೂ ಮಾರ್ಗದರ್ಶಕರಾಗಿ ತೇಜಸ್ವಿ ಅವರು ಭಾರತದಲ್ಲಿನ ಮಕ್ಕಳ ಸಾಹಿತ್ಯದ ಪರಿಪೂರ್ಣ ಅರಿವು ಮತ್ತು ಸಮಕಾಲೀನ ಮಕ್ಕಳ ಪುಸ್ತಕಗಳ ವಿವಿಧ ವಸ್ತುವಿಷಯಗಳು, ಪ್ರಕಾರಗಳು ಮತ್ತು ಮಾದರಿಗಳ ಬಹುಮುಖಿ ನಿರ್ವಹಣೆಯ ತಿಳಿವಳಿಕೆಯನ್ನು ತಮ್ಮೊಂದಿಗೆ ತರಲಿದ್ದಾರೆ.



# ಸಂಘಟಕರ ಕುರಿತು

parag

AN INITIATIVE OF TATA TRUSTS

Bahuroopi ಬಹುರೂಪಿ

ಟಾಟಾ ಟ್ರಸ್ಟ್‌ನ ಅಂಗಸಂಸ್ಥೆಯಾದ ‘ಪರಾಗ್’, ಭಾರತೀಯ ಭಾಷೆಗಳಲ್ಲಿ ಗುಣಮಟ್ಟದ ಮಕ್ಕಳ ಸಾಹಿತ್ಯ ಕೃತಿಗಳನ್ನು ರೂಪಿಸಿ, ಅವು ಸುಲಭವಾಗಿ ದಕ್ಕುವಂತೆ ಮಾಡುವ ಕಾರ್ಯದಲ್ಲಿ ತೊಡಗಿಕೊಂಡಿದೆ. ಶಾಲೆ ಮತ್ತು ಸಮುದಾಯದ ಗ್ರಂಥಾಲಯಗಳ ಜಾಲವನ್ನು ಬಲಪಡಿಸುವ, ಶಿಕ್ಷಕರಿಗಾಗಿ ವೃತ್ತಿಯಾಧಾರಿತ ಕೋರ್ಸ್‌ಗಳನ್ನು ನಡೆಸುವ, ಗ್ರಂಥಪಾಲಕರು, ಮಕ್ಕಳ ಪುಸ್ತಕಗಳ ರಚನಾಕಾರರ ಕಾರ್ಯತತ್ಪರತೆ ಹೆಚ್ಚಿಸುವ ಕಾರ್ಯಾಗಾರಗಳನ್ನು ಏರ್ಪಡಿಸುವ ಹಾಗೂ ಮಕ್ಕಳ ಸಾಹಿತಿಗಳಿಗೆ ಹಾಗೂ ಮಕ್ಕಳ ಸಾಹಿತ್ಯಕ್ಕೆ ಪ್ರಶಸ್ತಿ ನೀಡುವಂಥ ವಿವಿಧ ಯೋಜನೆಗಳ ಮೂಲಕ ಪರಾಗ್, ಮಕ್ಕಳ ಸಾಹಿತ್ಯ ಕ್ಷೇತ್ರವನ್ನು ಪೋಷಿಸುವ ಕಾರ್ಯವನ್ನೂ ಮಾಡುತ್ತಿದೆ. ಆರಂಭದಿಂದ  ಇದುವರೆಗೆ ಪರಾಗ್, ಭಾರತದ 9 ಭಾಷೆಗಳಲ್ಲಿ ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ರೂಪಿಸಲು ಬೆಂಬಲ ನೀಡಿದೆ.

‘ಬಹುರೂಪಿ’ ಪ್ರಕಾಶನವು ಒಂದು ಸ್ವತಂತ್ರ ಪ್ರಕಾಶನ ಸಂಸ್ಥೆಯಾಗಿದೆ. ಮಕ್ಕಳ ಪುಸ್ತಕಗಳು ಸೇರಿದಂತೆ ನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದೆ. ವಿವಿಧ ಇಂಪ್ರಿಂಟ್‌ಗಳ ಮೂಲಕ ಬಹುರೂಪಿಯು, ಕನ್ನಡ ಪುಸ್ತಕ ಪ್ರಕಾಶನ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಪುಸ್ತಕ ಪ್ರಕಟಣೆ ಮತ್ತು ಅತ್ಯಾಕರ್ಷಕ ಮುಖಪುಟ ವಿನ್ಯಾಸಕ್ಕಾಗಿ ನ್ಯಾಷನಲ್ ಫೆಡರೇಷನ್ ಆಫ್ ಪಬ್ಲಿಷರ್ಸ್ (ಎನ್‌ಎಫ್‌ಪಿ) ಮತ್ತು ಪಬ್ಲಿಷಿಂಗ್ ನೆಕ್ಸ್ಟ್ ಸೇರಿದಂತೆ ಹಲವಾರು ಮಹತ್ವದ ಪ್ರಶಸ್ತಿಗಳಿಗೆ ಪಾತ್ರವಾಗಿದೆ. ಈ ಪ್ರಕಾಶನ ಸಂಸ್ಥೆಯ ವಿವಿಧ ಲೇಖಕರು ಹಾಗೂ ಕೃತಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೂ ಭಾಜನರಾಗಿದ್ದಾರೆ.